ನಕ್ಷತ್ರಪಟ



ಆನಂದ ಪಾಟೀಲ

ಕಲೆ: ಸಂತೋಷ್ ಸಸಿಹಿತ್ಲು

# ಅಜ್ಜಿ ಹೇಳಿದ್ದೆಲ್ಲಾ ಕನ್‌ಫ್ಯೂಜು!



ಅಜ್ಜಿ ಕುಳಿತಿದ್ಲು
ಅಟ್ಟದ ಮೇಲೆ

ಕೈಯ್ಯ ಹೊತಗೊಂಡು
ತಲೇಮೇಲೆ

ಏನಾಯ್ತೇನಾಯ್ತ್
ಅಜ್ಜಿ ಅಜ್ಜಿ?

ಅಲ್ವೊ ಇಲ್ಲಿ
ಬೆಕ್ಕಮ್ಮನವರು

ಇಟ್ ಹೋಗಿದ್ರು
ಎಂಟ್ ನೂರ್ ಮರಿ

ಎಂಟೇ ಎಂಟು
ಉಳಿದಿವೆಯಲ್ಲಾ

ನೂರ್ ಯಾವೂರ್ಗೆ
ಹೊರಟೋದ್ವು ?

ಹೊಂಟೋದ್ರೆ ಹೋಗ್ಲಿ
ಗಂಟು ಮೂಟೆ ಕಟ್ಕೊಂಡು

ಎಂಟಾದ್ರು ಇವೆಯಲ್ಲಾ
ಸೊಂಟಾ ಬಗ್ಗಿಸಿ ನೋಡೋಕೆ

ಸೊಂಟ ಎಲ್ಲಿದೆ ಇಲ್ಲವೇ ಇಲ್ಲ!
ಬಗ್ಗಿ ಬಗ್ಗಿ ನೋಡೋಕೆ

ಕೆಳಗೇ ಬಿಟ್ಟು ಬಂದೀನಪ್ವಾ
ಅಂಟಿಕೊಂಡಿತ್ತು ಕಂಬಕ್ಕೆ!

ಕಣ್ಣಿವೆಯಲ್ಲಾ ಕನ್ನಡಕದವು
ಸೆಲ್ಲೇ ಇಲ್ಲದ ಬ್ಯಾಟರಿ ಹಾಗೆ

ಏಣಿ ಎಲ್ಲಿ ಬಚ್ಚಿಟ್ಟಿದ್ದೆ
ಕಾಲಿಟ್ಟಿಟ್ ಹತ್ಬಂದೆ!

ನೋಡಿದ್ ಮೇಲೇ
ಹೌಹಾರಿದ್ದು

ಯಾವಾಗ ಬರ್ತಾಳೊ
ಬೆಕ್ಕಮ್ಮಾ

ರಾತ್ರಿ ಎಲ್ಲಾ ಪಕ್ಕದಲ್ಲಿದ್ಲು
ಏನೇನೇನೇನೋ ಕನಸ್ ಹಾಳಾದ್ದು

ಮಲಗೋಕ್ಮುದ್ಲೆ ಹಚ್ಚಿಕೊಂಡಬಿಟ್ಲು
ಕಣ್ಣಿಗೆ ಕಣ್ಣೇ ಹತ್ತಿಲ್ಲಾ!

ಆ ಕನಸು ಈ ಕನಸು
ಮರಿ ಹಾಕಿದ್ದೂ ಅದರಲ್ಲೊಂದು!

ಮೀಸೆ ಮೇಲೆ ಎತ್ತೆತ್ತಿ
ಹೇಳಕೊಂಡಿದ್ಲು ಮಾರಾಯ್ತಿ

ಎಲ್ ಹೋದ್ಲು
ಪುಣ್ಯಾತಗಿತ್ತಿ

ಮರಿಗಳ ಕತೆ
ಹೀಗಾಯ್ತು

